# ಸಂಘರ್ಷದ ನಡುವೆ ಪ್ರೇಮಪಲ್ಲವಿ

'ಅದಕ್ಕೂ ಅವರು ಪೂರ್ವಭಾವಿಯಾಗಿ ವ್ಯವಸ್ಥೆ ಮಾಡಿಕೊಂಡಿದ್ದರು. ನಡುನಡುವೆ ನಿಂತುಕೊಂಡು, ಕೆಲಹೊತ್ತು ಸುಧಾರಿಸಿಕೊಂಡು ಹೋಗುವುದಕ್ಕೆ ಕಾರಣವಿದೆ. ಅವರಿಗೆ ಸುಸ್ತಾದಾಗ ಅಲ್ಲಲ್ಲಿ ಸ್ಥಾಪಿಸಲಾದ ತಾತ್ಕಾಲಿಕ ಔಟ್‌ಲೆಟ್‌ಗಳಲ್ಲಿ ಎನರ್ಜೈಸಿಂಗ್ ಪಾನೀಯವನ್ನು ನೀಡಲಾಗುತ್ತಿತ್ತು. ಜೊತೆಗೆ ವೈದ್ಯರ ತಂಡವೊಂದು ಅವರೊಂದಿಗೆ ಸಾಗಿತ್ತು. 'ತುರ್ತು ಟ್ರಾಮಾ ಕೇಂದ್ರ'ದ ವೈದ್ಯರು ಹಾಗೂ ನರ್ಸ್‌ಗಳು ಇದಕ್ಕಾಗಿಯೇ ಅಲ್ಲಲ್ಲಿ ಪಾದಯಾತ್ರೆ ಸಾಗುವ ಮಾರ್ಗದಲ್ಲಿ ಕ್ಯಾಂಪ್ ಮಾಡಿದ್ದರು.'

'ಅಂತೂ ಎಲ್ಲವೂ ಪೂರ್ವ ನಿಯೋಜಿತ?' ಎಂದು ಹನ್ನಾ ಉದ್ಗರಿಸಿದಳು.

ಪಾದಯಾತ್ರೆಯಲ್ಲಿ ಭಾಗವಹಿಸಲು ಕೇವಲ ಈ ನಗರದವರಲ್ಲದೆ ಅಕ್ಕಪಕ್ಕದ ಜಿಲ್ಲೆಗಳು, ಹೊರ ರಾಜ್ಯಗಳಿಂದಲೂ ಸದಸ್ಯರು ಆಗಮಿಸಿ ತಮ್ಮಲ್ಲಿ ಐಕ್ಯತೆ ಇದೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಈಗ ಆಡಳಿತ ವಿಭಾಗ ನಿರ್ಧಾರ ತೆಗೆದುಕೊಂಡರೆ ಅದು ಇಡೀ ದೇಶದ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆ ತರುವುದರಿಂದ ಹಿಡಿದು, ಅರೆಮಾನವ ಪಡೆಯ ಸದಸ್ಯರ ಜೀವನೋಪಾಯಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಅದು ಆಡಳಿತ ಯಂತ್ರದ ಹಣಕಾಸಿನ ವ್ಯವಸ್ಥೆಯ ಮೇಲೆ ಭಾರೀ ಹೊರೆ ಬೀಳುವುದಂತೂ ನಿಜ.'

'ಹಾಗಾದರೆ ಆಡಳಿತ ವಿಭಾಗ ಹಾಗೂ ಅರೆ ಮಾನವ ಪಡೆಯ ನಡುವೆ ಭಾರೀ ಜಟಾಪಟಿ ನಡೆಯುತ್ತಿದೆ ಎಂದಾಯಿತು...? '

'ಜಟಾಪಟಿ ಅನ್ನೋದಕ್ಕಿಂತ ಶೀತಲ ಸಮರ ಎಂದರೆ ಸರಿ ಇರುತ್ತೆ' ಎಂದು ಆ ವಿಷಯಕ್ಕೆ ತಿಲಾಂಜಲಿ ಇಡಲಾಯಿತು.

